5. ಹರಾಜು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ಆಗಲಿ ಅವರ ವಿಜಂಟರಿಗೆ ಆಗಲಿ ತಿಳಿಸಿದ ತಾರೀಖು ಲಾಗಾಯಿತು ಮೂರುದಿವಸಗಳೊಳಗಾಗಿ ಡಿಪಾಜಿಟ್ ಹಣ ಸೇರಿಸಿಕೊಂಡು ಒಟ್ಟು ಗೊತ್ತಾದ ಮೊಬಲಗನ್ನು ಮತ್ತು ಅದರಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಸೆಸ್ಸನ್ನೂ ಶಿವಮೊಗ್ಗ ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಜಮಾ ಮಾಡಿಸಬೇಕು. ಅದರಂತೆ ಮಾಡಲು ತಪ್ಪಿದಲ್ಲಿ ಸದರಿ 100 ರೂಪಾಯಿ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಂಡು ಮೇಲ್ಕಂಡ ಹಕ್ಕನ್ನು ಹರಾಜು ಮಾಡಿಸುವ ಆಫಿಸರಿಂದ ತಪ್ಪಿಹೋದ ದರಖಾಸ್ತುದಾರನ್ನು ನಷ್ಟಕ್ಕೆ ಗುರಿಮಾಡಿಸಿ ಹರಾಜು ಮಾಡಲಾದೀತು. ಈ ಹರಾಜಿನಲ್ಲಿ ಏನಾದರೂ ಫಾಯಿದೆ ಬಂದರೆ ತಪ್ಪಿಹೋದ ದರಖಾಸ್ತುದಾರನಿಗೆ ಏನು ಹಕ್ಕು ಇರಲಾರದು.

5. ಇದಲ್ಲದೆ ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಅನುಸರಿಸಿ ನಡಿಯಲು ಬದ್ಧನಾಗಿರತಕ್ಕ ಬಗ್ಗೆ ಇಜಾರೆದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಗೆ ಖಾಪಾಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

ಷ ರ ತ್ತು ಗ ಳು .

1. ಒಂದು ವರುಷಕ್ಕೆ ಕವ್ಳಿ ಇರುವ ಎಳೇ ಬುಡಗಳಲ್ಲಿ ಚಕ್ಕೆ ತೆಗಿಯದಂತೆಯು, ಕಡಿಯದಂತೆಯು ನೋಡಿಕೊಳ್ಳತಕ್ಕದ್ದು. ಚಕ್ಕೆ ತೆಗಿಯಲ್ಪಟ್ಟ ಗಿಡಗಳು ಹರಾಜುದಾರನದೆ ಆಗಿರುತ್ತೆ.
2. ಬೇರಬೇರೆ ಸ್ಥಳಗಳಲ್ಲಿ ಚಕ್ಕೆಯನ್ನು ಜಮಾಯಿಸಲು ನೇಮಿಸಲ್ಪಡುವ ವೇಸ್ಟ್ರು ಮತ್ತು ಪಿಕ್ಕಿ ಕಂಟ್ರಾಕ್ಟುದಾರುಗಳ ಹೆಸರುಗಳನ್ನು ನಮೂದಿನಿಂದ ಒಂದು ಪಟ್ಟಿಯನ್ನು ಕೊಡಬೇಕು.
3. ಡಿಸ್ಟ್ರಿಕ್ಟು ಫಾರೆಸ್ಟಾಫಿಸರು ಕೊಡುವ ನಮೂನೆಯಂತೆ ನಾಗಿಸಿದ ಚಕ್ಕೆಯ ವೊತ್ತವನ್ನು ತೋರಿಸುವ ಲೆಖವನ್ನು ಇಡತಕ್ಕದ್ದು. ಫಾರೆಸ್ಟ್ರು ರೇಂಜರ್ ಮತ್ತು ಅಮಲ್ದಾರರು ಯಾ ಪೊಲೀಸು ಇನ್ಸ್ಪೆಕ್ಟರು ಯಾ ಇವರ ದರ್ಜೆಗೆ ಮೇಲ್ಪಟ್ಟ ಇತರೇ ಆಫಿಸರ ಅಜಮಾಯಿಷಿಗೆ ಸದರೀ ಲೆಖ್ಖಗಳು ವಳಪಟ್ಟುದ್ದಾಗಿರುತ್ತೆ.
4. ಡಿಸ್ಟ್ರಿಕ್ಟು ಫಾರೆಸ್ಟಾಫಿಸರವರಿಂದ ವಿರ್ಪಡಿಸಲ್ಪಡುವ ವೇರಗೆ ನಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಚಕ್ಕೆಗೆ ಪ್ಯಾಸ್ ಪಡಿಯಾತಕ್ಕದ್ದು.
5. ವಾಯಿದೆಯು ಪೂರೈಸಿದ ನಂತರ ಜಮಾಯಿಸಿಕೊಂಡು ಶಿವಮೊಗ್ಗ ಡಿಸ್ಟ್ರಿಕ್ಟಿನ ಗಡಿ ವಳಗಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಾತಕ್ಕ ರೈಲ್ವೆ ಸ್ಟೇಷನ್ಗಳೊಳಗಾಗಲಿ ಬಾಕಿ ಇರತಕ್ಕ ಎಲ್ಲಾ ಚಕ್ಕೆ ಮೇಲಿನ ಹಕ್ಕನ್ನು ರದ್ದು ಪಡಿಸತಕ್ಕದ್ದು.
6. ಮೇಲ್ಕಂಡ ಷರತ್ತಿನ ವೇರಿಗೆ ನಡಿಯಲು ತಪ್ಪಿಹೋದಲ್ಲಿ ಇಜಾರೆ ರದ್ದು ಮಾಡುವದಲ್ಲದೆ ಆದುವರಿಗೂ ಜಮಾಯಿಸಿ ಹಾಜರು ಇಟ್ಟುಕೊಂಡು ಇರತಕ್ಕ ವಿಶಿಷ್ಟ ಚಕ್ಕೆಯನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ. ಡೆಪ್ಯುಟಿ ಕಮಿಷನರ್ ಸಾಹೇಬರವರು ನಿಷ್ಕರ್ಷಿಸುವ ವೇರ ಇಜಾರೆದಾರನಿಂದ ವಸೂಲಾದ ಪೂರಾ ಮೊಬಲಗಾಗಲಿ ಅಂಶಾ ಅಪೈಕಿ ಕೆಲವು ಮೊಬಲಗಾಗಲಿ ಸೇರಿಸಲ್ಪಡಬಹುದೀತು. ಅಂಥಾ ತಪ್ಪಿದ ಕಾಲದಲ್ಲಿ ಇಜಾರೆದಾರನಿಂದ ಬಾಕಿ ಇರತಕ್ಕ ಮೊಬಲಗು ರವಿನ್ಯೂ ಕಂದಾಯದರೀತಿ ವಸೂಲ್ಮಾಡತಕ್ಕದ್ದು.

ಎ. ಪೊನ್ನಸಾಮಿ ಪೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ಪ್ರ ಕ ಟ ನೆ .

ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಚನ್ನಗಿರಿ ಮತ್ತು ಹೊಳಲಕೆರೆ ತಾಲ್ಲೂಕುಗಳಲ್ಲಿರುವ ತುಪ್ಪದಹಳ್ಳಿ ಫಾರೆಸ್ಟನ್ನು ಮೆನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ ೯ 1909ನೆ ಇಸವಿ ಜೂ ತಾರೀಖು 3ನೆ ಕನ್ನಡ ಮೈಸೂರು ಗೆಜೆಟ್ಟಿನ 2ನೆ ಭಾಗದ 473, 474, 475ನೆ ಪೇಜಿನಲ್ಲಿ ವಿಕದವಾಗಿ ವಿವರಿಸಲ್ಪಟ್ಟಿದೆ.

ಎಂ. ಶ್ಯಾಮರಾವ್, ಫಾರೆಸ್ಟ್ ಸೆಟಲ್ಮೆಂಟ್ ಆಫಿಸರ್ ಇ ಮೈಸೂರು.

ತುಮಕೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೆ ಜೂ 1909.

ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಚಿಕ್ಕನಾಯಿಕನಹಳ್ಳಿ ಹೋಬಳಿ ಜೋಡಿ ಹೊಸಹಳ್ಳಿ ಗ್ರಾಮವನ್ನು 1909ನೆ ಇಸವಿ ಜುಲೈ 19ನೆ ತಾರೀಖಿನಲ್ಲಿ ಸದರಿ ಜೋಡಿ ಗ್ರಾಮವನ್ನು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಗ್ರಾಮವು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿರುವ ಸಂದರ್ಭದಲ್ಲಿ ಮಧ್ಯಗಿರಿ ಸಬ್ ಡಿವೀಜ್ಞ ಅಸಿಸ್ಟೆಂಟ್ ಕಮಿಷನರವರು ಇಷ್ಟಾನುಸಾರವಾಗಿ ಗ್ರಾಮವನ್ನು ಪೂರ್ತಿಯಾಗಿ ಅಥವಾ ವೃತ್ತಿಗಳನ್ನು ಪ್ರತ್ಯೇಕವಾಗಿ ಆಗಲಿ ಹರಾಜು ಮಾಡಬಹುದು.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೇ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಗೆ ಸದರಿ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೇ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳ್ಕುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡ್ಲೆ ಹರಾಜುದಾರ್ರು ಸದರಿ ಸ್ವತ್ತಿನ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ೯ ಮೊಹರ್ ಮಾಡಲ್ಪಟ್ಟ ಬಂದು ಹರಾಜು ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆರುಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಪಷ್ಟಲಿತ್ವಗಳಿಗೆ ಗವರ್ಮೆಂಟಿನವರು ಜವಾಬುದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತನಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲ್‌ನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಭೂಮಿಯ ಸ್ವಭಾವ, ಆಕಾರ.	ಆಕಾರ.	ಅಂದಾಜು ಕಿಸ್ತುಬಂ.	ಸರಕಾರಕ್ಕೆ ಬರಬೇಕಾದ ಬಾಕೀ ಮೊಬಲಗು.	ಹರಾಜು ಆಗುವ ತಾರೀಖು	ಹರಾಜು ಆಗುವ ಸ್ಥಳ.
ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿ	ಜೋಡಿ ಕೊಸಹಳ್ಳಿ	ತಿಮ್ಮಜೋಸಿಯರ ರಾಮಾಜೋಯಿಸ ನತ್ತು ಪಗ್ಗೆರೆರು	ಪೂರ್ತಿ ಗ್ರಾಮ						
						ಎ. ಗು.				
					ಸಾಗುವಳಿಗೆ ನಾಲಾಯಕ್ ಖುಷ್ಕೀ.	1,058 2				
					ಸಾಗು	183 10	ರೂ. ಅ. ಪೈ.	ರೂ. ಅ. ಪೈ.		
					ಬಂಜರು	295 38	548 6 6	1,000 0 0		
					ಬಾಗಾಯಿತು	59 31				
					ಸಾಗು ಲಾಯಕ್ ಬಂಜರು.	46 8				
					ಜುಮ್ಲಾ	1,643 9				

1907-08ನೆ ಸಾಲಿಗೆ ಬರ 150 4 9
ಬೇಕಾದ ಬಾಕಿ ಜೋಡಿ
ಮೊಬಲಗು.
ನೋಟೀಸ್ ಫೀ ವಗೈರೆ ... 5 10 2
ಜುಮ್ಲಾ ... 155 14 11

19—7—1909

ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಕಛೇರಿ

ಗ್ರಾಮಕ್ಕೆ ಚಕ್ಕುಬಂದಿ.
ಪೂರ್ವಕ್ಕೆ—ಹೊಂಬಳಕಟ್ಟೆ ಮತ್ತು ಕಾತ್ರಿಕೆಹಾಳ್ ಗ್ರಾಮಗಳು.
ಪಶ್ಚಿಮಕ್ಕೆ—ಚನ್ನೇನಹಳ್ಳಿ ಮತ್ತು ಬಾಗಾಯಿತು ಗ್ರಾಮ.
ಉತ್ತರಕ್ಕೆ—ಚನ್ನೇನಹಳ್ಳಿ ಮತ್ತು ಕೋಡಿಹಳ್ಳಿ.
ದಕ್ಷಿಣಕ್ಕೆ—ಭಾವನಹಳ್ಳಿ ಮತ್ತು ಗೊಲ್ಲರಹಳ್ಳಿ ಬಾಗಾಯಿತು.

ಎ. ಮಾಧವರಾವ್,
ಫಸ್ಟ್ ಡೆಪ್ಯುಟಿ ಕಮಿಷನರ್.